ದಿನಾಂಕ 26-12-2024 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

ಪಾಟೀ ಸವಾಲುಃ   2 ನೇ ಎದುರುದಾರರ  ಪರವಾಗಿ ಶ್ರೀ ಎಎಂ  ವಕೀಲರವರಿಂದಃ

ಮದುವೆಯ ಆಮಂತ್ರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಆದರೆ ಹುಡುಕಬೇಕಾಗುತ್ತದೆಂದು ಸಾಕ್ಷಿ ನುಡಿಯುತ್ತಾರೆ.  ಸದ್ರಿ ಮದುವೆಯ ನಮ್ಮ ಸಂಬಂಧಿಕರದ್ದು.  ಅಲಿಮಾರವರು ನಿಂತಿರುವ ಜಾಗದಿಂದ 100 ಮೀಟರ್ ಅಂತರದಲ್ಲಿ ಟಯೋಟ ಷೋ ರೂಂ. ಇರುತ್ತದೆ. ಅಪಘಾತ ಸ್ಥಳ ರಾ.ಹೆ. ಎಂದರೆ ಸರಿ.  ಮಧ್ಯದಲ್ಲಿ ರಸ್ತೆ ವಿಭಜಕವಿರುತ್ತದೆಂದರೆ ಸರಿ.  ಸದ್ರಿ ಅಪಘಾತವು ಉಡುಪಿಯಿಂದ ಮಂಗಳೂರು ಕಡೆಗೆ ಹೋಗುವ ರಸ್ತೆಯಲ್ಲಿ ಆಗಿತ್ತು.  ಸದ್ರಿ ರಸ್ತೆಯ ಪೂರ್ವ ಅಂಚಿನಲ್ಲಿ ಅಪಘಾತವಾಗಿತ್ತು.  ಉಡುಪಿಯಿಂದ ಮಂಗಳೂರು ಕಡೆಗೆ ಹೋಗುವ  ರಸ್ತೆಯ ಬಲಬದಿಯಲ್ಲಿ ಆಗಿತ್ತು.  ಸದ್ರಿ ರಸ್ತೆ ಅಂದಾಜು 30 ರಿಂದ 35 ಅಡಿ ಅಗಲವಿರಬಹುದು. ಡಿವೈಡರ್ ನಿಂದ 4 ಅಡಿ ಅಂತರದಲ್ಲಿ ಅಪಘಾತವಾಗಿರಬಹುದು.  ನನ್ನ ಜೊತೆ ಯಾರೂ ಇರಲಿಲ್ಲ.  ಅಪಘಾತಕ್ಕೊಳಗಾದ ವ್ಯಕ್ತಿ ನಾನು ನೋಡುವಾಗ ಒಂದು ಬೈಕ್ ಬಲಭಾಗಕ್ಕೆ ಹೋಗುತ್ತಿತ್ತು, ಹಿಂದಿನಿಂದ ಬಂದ ಕಾರು ಸದ್ರಿ ಬೈಕ್ ನ ಎಡಭಾಗಕ್ಕೆ ಹೊಡೆದು, ಸದ್ರಿ ಬೈಕ್ ಡಿವೈಡರ್ ಗೆ ಹೊಡೆಯಿತು ನಂತರ ಇಬ್ಬರೂ ಸಹ ಬಿದ್ದರು, ಅದರಲ್ಲಿ ಹಿಂಬದಿ ಸವಾರ ಕಾರಿನ ಮೇಲೆ ಬಿದ್ದಿರುತ್ತಾನೆ. ಪೋಲೀಸಿನವರಿಗೆ ಹೇಳಿಕೆಯನ್ನು ನೀಡುವಾಗ ಈ ದಿನ ನ್ಯಾಯಾಲಯದಲ್ಲಿ ನೀಡಿರುವ ಹೇಳಿಕೆಯನ್ನು ನೀಡಿರುತ್ತೇನೆ.  ಸದ್ರಿ ದ್ವಿಚಕ್ರ ವಾಹನವನ್ನು ನಾನು ಸ್ವಲ್ಪ ಹತ್ತಿರದಿಂದ ನೋಡಿರುತ್ತೇನೆ. ಸದ್ರಿ ದ್ವಿಚಕ್ರ ವಾಹನವನ್ನು ಕಾರು ಓವರ್ ಟೇಕ್ ಮಾಡಿತ್ತು.  ನಾನು ತಕ್ಷೀರು ಸ್ಥಳ ಪೋಲೀಸಿನವರಿಗೆ ತೋರಿಸಿರುತ್ತೇನೆ. ಗಾಯಗೊಂಡವರು ನಮ್ಮ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ.  ನಾನು ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲು

ಮಾಡಿಲ್ಲ.   ಘಟನೆಯ ಬಗ್ಗೆ ನಾನು ಯಾವುದೇ ದೂರನ್ನು ನೀಡಿಲ್ಲ.   ನಾನು ಅಪಘಾತ ಸ್ಥಳಕ್ಕೆ ಹೋಗುವ ಸಮಯದಲ್ಲಿ ಸುಮಾರು 20 ಜನ ಸೇರಿದ್ದರು.   ನಾನು ನಿಂತ ಸ್ಥಳಕ್ಕೂ ಹಾಗೂ ಅಪಘಾತ ಸ್ಥಳಕ್ಕೂ ಸುಮಾರು 30 ರಿಂದ 35 ಅಡಿ ಅಂತರವಿದೆ. ನಾನು ಆಸ್ಪತ್ರೆಗೆ ಹೋಗಿ ಏನೂ ವಿಚಾರಿಸಿರುವುದಿಲ್ಲ. ಸದ್ರಿ ಅಪಘಾತವನ್ನು ನಾನು ನೋಡಿಲ್ಲ.  ಕಾರು ಚಾಲಕನ ಯಾವುದೇ ತಪ್ಪಿನಿಂದ ಸದ್ರಿ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಬೈಕ್  ಚಾಲಕನ ನಿರ್ಲಕ್ಷ್ಯತನದಿಂದ ಸದ್ರಿ ಅಪಘಾತ ಸಂಭವಿಸಿರುತ್ತದೆಂದರೆ ಸರಿಯಲ್ಲ.  ಬೈಕ್ ಚಾಲಕನ ತಪ್ಪಿನಿಂದ ಸದ್ರಿ ಅಪಘಾತವಾಗಿರುತ್ತದೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.
ಉಡುಪಿ.